**Sanjevani**

**Mantri Square Mall**

**Date: 16-03-2010 | Edition: Bangalore | Page: 8 | Source: Bureau | Clip size (cm): W: 6 H: 13**

Clip: 1 of 1

# ಮಂತ್ರಿಸ್ಕ್ವೇರ್ ಮಳಿಗೆ ನಾಳೆ ಉದ್ಘಾಟನೆ

(ನಮ್ಮ ಪ್ರತಿನಿಧಿಯಿಂದ)

ಬೆಂಗಳೂರು, ಮಾ. ೧೫- ದೇಶದ ಅತಿದೊಡ್ಡ ಮಂತ್ರಿ ಸ್ಕ್ವೇರ್ ಮಾರಾಟ ಮಳಿಗೆ ನಗರದ ಮಲ್ಲೇಶ್ವರಂನಲ್ಲಿ ತಲೆ ಎತ್ತಿದ್ದು, ನಾಳೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಉದ್ಘಾಟಿಸಲಿದ್ದಾರೆ ಎಂದು ಮಂತ್ರಿ ಡೆವಲಪರ್ಸ್‌ನ ವ್ಯವಸ್ಥಾಪಕ ನಿರ್ದೇಶಕ ಸುಶೀಲ್ ಮಂತ್ರಿ ಇಂದಿಲ್ಲಿ ತಿಳಿಸಿದರು.

500 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣವಾಗಿರುವ ಈ ಮಳಿಗೆಯಲ್ಲಿ 10 ಸಾವಿರಕ್ಕೂ ಹೆಚ್ಚು ಅಂತಾರಾಷ್ಟ್ರೀಯ ಬ್ರಾಂಡ್‌ಗಳು ಲಭ್ಯವಿದೆ. ಅಲ್ಲದೆ, 4,600 ಮಂದಿಗೆ ಉದ್ಯೋಗಾವಕಾಶ ಕಲ್ಪಿಸಲಾಗುತ್ತಿದೆ ಎಂದು ಅವರು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಮಲ್ಲೇಶ್ವರಂನಲ್ಲಿ ಆರಂಭವಾಗಿರುವ ಮಂತ್ರಿಸ್ಕ್ವೇರ್ ದೇಶದ ಎಲ್ಲ ರಿಟೇಲ್ ಉದ್ಯಮದ ಚಿತ್ರಣ ಬದಲು ಮಾಡಲಿದೆ ಎಂದರು.

ಮಂತ್ರಿಸ್ಕ್ವೇರ್ ಎರಡನೇ ಮಹಡಿಯಲ್ಲಿ ಮೆಟ್ರೋರೈಲು ನಿಲ್ದಾಣ ಬರುತ್ತಿರುವುದು ದೇಶದಲ್ಲಿಯೇ ಮೊದಲು. ಇದರಿಂದ ಗ್ರಾಹಕರಿಗೆ ಹೆಚ್ಚು ಅನುಕೂಲವಾಗಲಿದೆ ಎಂದು ಅವರು ಮೆಟ್ರೋರೈಲು ನಿಲ್ದಾಣವನ್ನು ಜಂಟಿ ಸಹಭಾಗಿತ್ವದಲ್ಲಿ ನಿರ್ಮಿಸಲಾಗುತ್ತಿದೆ ಎಂದು ಅವರು ಹೇಳಿದರು.

ಮಳಿಗೆಯಲ್ಲಿ 6 ಐನಾಕ್ಸ್ ಚಿತ್ರಮಂದಿರ, ಶಾಪಿಂಗ್ ಕಾಂಪ್ಲೆಕ್ಸ್ ಸೇರಿದಂತೆ ಹಲವು ಸೌಲಭ್ಯ ಹೊಂದಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಸ್ನೇಹಲ್ ಮಂತ್ರಿ, ಜೋನಾಥನ್ ಯಾಚ್ ಹಾಗೂ ವಿಶ್ವೇಶ್ವರ ಉಪಸ್ಥಿತರಿದ್ದರು.